## ಪೊಲೀಸ್ ಅಧೀಕ್ಷಕರವರ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

---

**ಪತ್ರಿಕಾ ಪ್ರಕಟಣೆ**

## ದೊಡ್ಡಬಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣೆ

# ದೊಡ್ಡಬಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದು ಹಾಗೂ ಗೌರಿಬಿದನೂರು, ತೊಂಡೆಬಾವಿ ಕಡೆ ಕಳ್ಳತನ ಕೃತ್ಯ ವೆಸಗಿದ್ದ 4 ಜನ ಆರೋಪಿಗಳ ಬಂಧನ.

ದಿನಾಂಕ 11/06/2021 ರಂದು ಗೌಡಹಳ್ಳಿ ಗ್ರಾಮದ ಜಮೀನಿನಲ್ಲಿ ಬೋರ್ ವೆಲ್‌ಗೆ ಅಳವಡಿಸಿದ್ದ 250 ಮೀಟರ್ ಕೇಬಲ್ ಕಳ್ಳತನವಾಗಿದ್ದು ದೊಡ್ಡಬಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಮೊ.ನಂ 172/2021 ಕಲಂ 379 ಐಪಿಸಿ ರೀತ್ಯ ಪ್ರಕರಣ ದಾಖಲಾಗಿರುತ್ತದೆ.

ದಿನಾಂಕ 17/06/2021 ರಂದು ನಂದಿ ಮೋರಿ ಬಳಿ ಇರುವ ಇಂಡೇನ್ ಗ್ಯಾಸ್ ಆಫೀಸ್‌ನ ರೋಲಿಂಗ್ ಶೆಟರ್ ಅನ್ನು ಮೀಟಿ ಮೂರು ಗ್ಯಾಸ್ ಸ್ಟೌವ್‌ಗಳು ಕಳ್ಳತನವಾಗಿದ್ದು ದೊಡ್ಡಬಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಮೊ ನಂ 177/2021 ಕಲಂ 457,380 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿರುತ್ತದೆ.

ದಿನಾಂಕ 22/06/2021 ರಂದು ಗೌರಿಬಿದನೂರು ಟೌನ್ ಹಿರೇಬಿದನೂನಲ್ಲಿ ಕೆಎ-40-ಇಎಫ್-2787 ಪಲ್ಸರ್ ಮೋಟಾರ್ ಸೈಕಲ್ ಕಳ್ಳತನವಾಗಿದ್ದು ಗೌರಿಬಿದನೂರು ನಗರ ಪೊಲೀಸ್ ಠಾಣೆಯಲ್ಲಿ ಮೊ.ನಂ 88/2021 ಕಲಂ 379 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿರುತ್ತದೆ.

ದಿನಾಂಕ 24/06/2021 ರಂದು ತೊಂಡೆಬಾವಿ ರೈಲ್ವೆ ಸ್ಟೇಷನ್ ಬಳಿ ಕೆಎ-40-ಆರ್-0480 ಪಲ್ಸರ್ ಮೋಟಾರ್ ಸೈಕಲ್ ಕಳ್ಳತನವಾಗಿದ್ದು ಮಂಚೇನಹಳ್ಳಿ ಪೊಲೀಸ್ ಠಾಣೆಯಲ್ಲಿ ಮೊ.ನಂ 88/2021 ಕಲಂ 379 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿರುತ್ತದೆ.

ದಿನಾಂಕ 29/06/2021 ರಂದು ಪಿ.ಎಸ್.ಐ ಶ್ರೀ ಮಂಜುನಾಥ.ಡಿ ಹಾಗೂ ಸಿಬ್ಬಂದಿಯವರಾದ ಹೆಚ್.ಸಿ ರಾಧಕೃಷ್ಣ , ಹೆಚ್.ಸಿ ರಂಗನಾಥ ಹೆಚ್.ಸಿ. ವೆಂಕಟೇಶ್ ರವರು ವಿಶೇಶ ರಾತ್ರಿಗಸ್ತಿನಲ್ಲಿದ್ದು ವಾಹನಗಳನ್ನು ತಪಸಾಣೆ ಮಾಡುತ್ತಿದ್ದಾಗ ಈ ಕೆಳಕಂಡ ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ಮಾಡಿದಾಗ,ಆರೋಪಿಗಳು ಮೇಲ್ಕಂಡ ಪ್ರಕರಣಗಳಲ್ಲಿ ಕಳ್ಳತನ ಕೃತ್ಯವೆಸಗಿರುವುದಾಗಿ ತಿಳಿಸಿದ್ದು ದಿನಾಂಕ 29/06/2021 ರಂದು ಆರೋಪಿಗಳಾದ



ನಜೀರ್ @ಅಚಿಥಿ



ಕೇಶವ @ ಸುಣ್ಣ



ಸಲ್ಮಾನ್ @ ಮಾನತ್



ಶ್ರೀಕಾಂತ @ ಮೊಟಾ

**ಎ-1. ನಜೀರ್ @ ಅಮರ್ ಬಿನ್ ಲೇಟ್ ಕರೀಂಸಾಬ್ .28 ವರ್ಷ, ಮುಸ್ಲಿಂ ಜಾನಾಂಗ, ಗಾರೆ ಕೆಲಸ ಮುತ್ತೂರು ಗ್ರಾಮ 6ನೇ ವಾರ್ಡು ದೊಡ್ಡಬಳ್ಳಾಪುರ ಟೌನ್**
**ಎ-2. ಕೇಶವ @ ಸುಣ್ಣ ಬಿನ್ ಲೇಟ್ ಪ್ರಕಾಶ 19 ವರ್ಷ, ಬಲಜಿಗರು, ಗಾರೆಕೆಲಸ ಮುತ್ತೂರು ಗ್ರಾಮ 6ನೇ ವಾರ್ಡು ದೊಡ್ಡಬಳ್ಳಾಪುರ ಟೌನ್**
**ಎ-3 ಸಲ್ಮಾನ್ @ ಮಾನತ್ ಬಿನ್ ಸಾಧಿಕ್ 20 ವರ್ಷ, ಮುಸ್ಲಿಂ ಜಾನಾಂಗ, ವೆಲ್ಡಿಂಗ್ ಕೆಲಸ ಮುತ್ತೂರು ಗ್ರಾಮ 6ನೇ ವಾರ್ಡು ದೊಡ್ಡಬಳ್ಳಾಪುರ ಟೌನ್**
**ಎ-4 ಶ್ರೀಕಾಂತ @ ಮೊಟಾ ಬಿನ್ ವೆಂಕಟೇಶ್ 21ವರ್ಷ, ಪರಿಶಿಷ್ಥ ಜಾತಿ ಕೂಲಿ ಕೆಲಸ, ಹೊಸೂರು ಗ್ರಾಮ ಗೌರಿಬಿದನೂರು ತಾಲ್ಲೂಕು ಚಿಕ್ಕಬಳ್ಳಾಪುರ ಜಿಲ್ಲೆ.**

ರವರುಗಳನ್ನು ದಸ್ತಗಿರಿ ಮಾಡಿ 04 ಪ್ರಕರಣಗಳನ್ನು ಪತ್ತೆ ಮಾಡಿದ್ದು ಈ ಆರೋಪಿಗಳಿಂದ 1) ಎರಡು ಪಲ್ಸರ್ ಮೋಟಾರ್ ಸೈಕಲ್ 2) ಮೂರು ಗ್ಯಾಸ್ ಸ್ಟೌವ್ 3)200 ಮೀಟರ್ ಕೇಬಲ್, ಒಟ್ಟು ಸುಮಾರು 1,04,000/- ರೂ ಮೌಲ್ಯದ್ದನ್ನು ಅಮಾನತ್ತುಪಡಿಸಿಕೊಂಡಿರುತ್ತದೆ.

ಬೆಂಗಳೂರು ಜಿಲ್ಲೆಯ ಮಾನ್ಯ ಪೊಲೀಸ್ ಅಧೀಕ್ಷಕರಾದ ಡಾ॥ ಕೋನ ವಂಶೀಕೃಷ್ಣ, ಮಾನ್ಯ ಅಪರ ಪೊಲೀಸ್ ಅಧೀಕ್ಷಕರವರಾದ ಶ್ರೀ ಲಕ್ಷ್ಮೀಗಣೇಶ್,ಮಾನ್ಯ ದೊಡ್ಡಬಳ್ಳಾಪುರ ಉಪ-ವಿಭಾಗದ ಡಿ.ವೈ.ಎಸ್.ಪಿ. ಶ್ರೀ ಟಿ. ರಂಗಪ್ಪ ರವರ ಮಾರ್ಗದರ್ಶನದಲ್ಲಿ ದೊಡ್ಡಬಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣೆಯ ಮಾನ್ಯ ಪೊಲೀಸ್ ನಿರೀಕ್ಷಕರವರಾದ ಶ್ರೀ ಬಿ.ಎಸ್. ಸತೀಶ್ ರವರ ನೇತ್ರತ್ವದಲ್ಲಿ ದೊಡ್ಡಬಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣೆಯ ಪಿ.ಎಸ್.ಐ. ಶ್ರೀ ಮಂಜುನಾಥ.ಡಿ ರವರು ಹಾಗೂ ಸಿಬ್ಬಂದಿಯವರುಗಳಾದ ಹೆಚ್.ಸಿ ರಾಧಾಕೃಷ್ಣ, ರಂಗನಾಥ, ಜಿ.ಆರ್.ವೆಂಕಟೇಶ್, ರವರು ಈ ಪ್ರಕರಣಗಳನ್ನು ಪತ್ತೆ ಮಾಡಿರುತ್ತಾರೆ.

ಪೊಲೀಸ್ ಅಧೀಕ್ಷಕರು,
ಬೆಂಗಳೂರು ಜಿಲ್ಲೆ.